# ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಸಂತೋಷದ ಕಿರಣ?

ಕೃತಿ ಗುಪ್ತ

ಆರಂಭ ಕಾಲದಿಂದಲೂ ಶಿಕ್ಷಣದ ಅರ್ಥವು ಕಾಲಕಾಲಕ್ಕೆ ಬದಲಾಗುತ್ತ ಬಂದಿದೆ. ಪ್ರಾಚೀನ ಕಾಲದಲ್ಲಿ ಶಿಕ್ಷಣವನ್ನು ವ್ಯಕ್ತಿಯ 'ಧರ್ಮ' ಎಂದು ವ್ಯಾಖ್ಯಾನಿಸಲಾಗುತ್ತಿದ್ದುದು ಇಂದು ಅದನ್ನು 'ವೈಜ್ಞಾನಿಕ ಆಲೋಚನೆ' ಎಂದು ಅರ್ಥೈಸಲಾಗುತ್ತಿದೆ. ಭಾರತೀಯ ಸಂವಿಧಾನದ ಪೀಠಿಕೆಯಲ್ಲಿ ಬಿಂಬಿಸಿರುವಂತೆ ಓರ್ವ ಸುಶಿಕ್ಷಿತ ಭಾರತೀಯನ ಕುರಿತ ವ್ಯಾಖ್ಯಾನ ಹೀಗಿದೆ: ವೈಜ್ಞಾನಿಕ ಮನೋಧರ್ಮ ಮತ್ತು ಉದಾರ ದೃಷ್ಟಿಕೋನ ಹೊಂದಿರುವ ವ್ಯಕ್ತಿ, ವೈಯಕ್ತಿಕ ಆಲೋಚನಾ ಸಾಮರ್ಥ್ಯ ಹೊಂದಿರುವವನು. ಶಾಂತವಾಗಿ ಮತ್ತು ಸಂತೋಷವಾಗಿ ಇರುತ್ತಾ ತನ್ನ ಅವಲೋಕನಗಳ, ಪ್ರಯೋಗಗಳ ಮತ್ತು ಚಿಂತನೆಗಳ ಅಡಿಪಾಯದ ಮೇಲೆ ಹೊಸ ಜ್ಞಾನದ ಯುಗವನ್ನು ಪ್ರಾರಂಭಿಸುವವನು. (ಅಯವ್ ಒರಗದ್, 2010, ಹೈನೋಲ್ಟ್ಸ್, 2016). 1947ರಲ್ಲಿ ದೇಶ ಕಂಡ ಈ ಕನಸು, ಸ್ವಾತಂತ್ರ್ಯ ಪಡೆದ 73 ವರ್ಷಗಳ ನಂತರವಾದರೂ ನೆರವೇರಿದೆಯೇ?

**ಶಿಕ್ಷಣದ ಗುರಿಗಳು:**

ಶಿಕ್ಷಣದ ಮೇಲೆ ಸರಕಾರ ಹೂಡಿದ ಯಾವುದೇ ಹೂಡಿಕೆಯು ಭವಿಷ್ಯದ ಲಾಭದ ದೃಷ್ಟಿಯಿಂದ ಕೂಡಿರುತ್ತದೆ. ವಿಜ್ಞಾನ, ಗಣಿತ ಮತ್ತು ಕಲೆಯ ಕ್ಷೇತ್ರಗಳಲ್ಲಿ ಹೊಸ ಜ್ಞಾನ ಮತ್ತು ಸಂಶೋಧನೆಗಳ ಹೆಬ್ಬಾಗಿಲುಗಳನ್ನು ತೆರೆಯಲು ನಮಗೆ ಸಾಧ್ಯವಾಗಿದೆ. ಆದರೆ ಪ್ರತಿ ವರ್ಷ ಬಹು ಸಂಖ್ಯೆಯ ಯುವಜನರನ್ನು ಶಿಕ್ಷಿತರನ್ನಾಗಿ ಮಾಡಿದ ಮೇಲೂ, ಹಿಂಸೆ, ನೋವು, ದುರಾಸೆ, ದ್ವೇಷ ಇಲ್ಲದ ಬದುಕಿನ ಭರವಸೆಯನ್ನು ಅವರಿಗೆ ಕೊಡಲಾಗುತ್ತಿಲ್ಲ ಎಂಬ ವಾಸ್ತವಕ್ಕೆ ನಾವು ನಮ್ಮ ಕಣ್ಣುಗಳನ್ನು ಮುಚ್ಚಿಕೊಳ್ಳಲು ಸಾಧ್ಯವಿಲ್ಲ. ಸಾಮಾಜಿಕ ಪಿಡುಗುಗಳಿಂದಾಗಿ ಅತಿವೇಗವಾಗಿ ಕೆಡುಕಿನ ಸನ್ನಿವೇಶಗಳು ಏರುತ್ತಿರುವುದು ಜಾಗತಿಕವಾಗಿ ಇಂದು ಮಾನವ ಕುಲವು ಎದುರಿಸುತ್ತಿರುವ ಬಹುದೊಡ್ಡ ಬೆದರಿಕೆಯಾಗಿದೆ. (ಶಿಕ್ಷಣ ನಿರ್ದೇಶನಾಲಯ, ರಾಷ್ಟ್ರ ರಾಜಧಾನಿ ಪ್ರದೇಶದ ಸರಕಾರ, ದೆಹಲಿ).


2018ರ ವಿಶ್ವ ಸಂತೋಷ ವರದಿಯಲ್ಲಿ ಭಾರತವು ಮತ್ತೆ 133ನೇ ಸ್ಥಾನದಲ್ಲಿದ್ದು, ಪ್ರಪಂಚದಲ್ಲಿ ಅತಿಹೆಚ್ಚು ಆತ್ಮಹತ್ಯೆ ಮಾಡಿ-ಕೊಳ್ಳುತ್ತಿರುವ ವಿದ್ಯಾರ್ಥಿಗಳ ಪ್ರಮಾಣದಲ್ಲೂ ಮುಂಚೂಣಿಯಲ್ಲಿದೆ. (ಇಟಿ ಕಾಂಟ್ರಿಬ್ಯೂಟರ್ಸ್, 2018). ಈ ಅಂಕಿ-ಅಂಶಗಳು ಭಾರತೀಯ ಶಾಲೆಗಳಲ್ಲಿ ವಿದ್ಯಾರ್ಥಿಗಳ ಯೋಗಕ್ಷೇಮದ ವಿಷಯದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಪ್ರಶ್ನಿಸುವಂತೆ ಇವೆ.

ಇದನ್ನು ಒಂದು ಬಿಕ್ಕಟ್ಟು ಎಂದು ಪರಿಗಣಿಸಿ, ದೆಹಲಿ ಸರಕಾರವು ಪಠ್ಯಕ್ರಮವೊಂದನ್ನು ಯೋಚಿಸಿತು. ಈ ಪಠ್ಯಕ್ರಮವು ಬೌದ್ಧಿಕ ಬೆಳವಣಿಗೆ, ಭಾಷೆ, ಸಾಕ್ಷರತೆ ಮುಂತಾದವುಗಳನ್ನು ಪ್ರೋತ್ಸಾಹಿಸುವುದರ ಜೊತೆಗೆ ವಿದ್ಯಾರ್ಥಿಗಳ ಯೋಗಕ್ಷೇಮ ಮತ್ತು ಅವರ ಸಂತೋಷವನ್ನೂ ಪರಿಗಣಿಸಿತು (ಎಸ್‌ಸಿಇಆರ್‌ಟಿ, ಡೆಲ್ಲಿ, 2019). ಈ ಕನಸನ್ನು ಸಾಕಾರಗೊಳಿಸಲು, ಜುಲೈ 2018ರಲ್ಲಿ ದೆಹಲಿ ಸರಕಾರದ ನೇತೃತ್ವ ವಹಿಸಿದ ಆಮ್ ಆದ್ಮಿ ಪಕ್ಷವು ಸಂತೋಷದ ಪಠ್ಯಕ್ರಮವನ್ನು ನರ್ಸರಿಯಿಂದ 8ನೇ ತರಗತಿವರೆಗೆ ರಾಷ್ಟ್ರೀಯ ಎನ್‌ಸಿಟಿ (ರಾಷ್ಟ್ರ ರಾಜಧಾನಿ ಗಡಿಪ್ರದೇಶ)ಯ ಒಳಗಿನ ಎಲ್ಲಾ ಸರಕಾರಿ ಶಾಲೆಗಳಲ್ಲಿ ಜಾರಿಗೆ ತಂದಿತು.



ನನ್ನ ಚಳಗಾಲದ ಕ್ಷೇತ್ರ ಯೋಜನೆಯಾಗಿ ಸಂತೋಷ ಪಠ್ಯಕ್ರಮದ ಮೇಲೆ ನಾನೊಂದು ಸ್ವತಂತ್ರ ಅಧ್ಯಯನ ನಡೆಸಿದೆ. ಏಳು ವಾರಗಳಗಿಂತಲೂ ಹೆಚ್ಚಿನ ಸಮಯವನ್ನು ಕ್ಷೇತ್ರಕಾರ್ಯದಲ್ಲಿ ತೊಡಗಿಸಿಕೊಂಡೆ. ದೆಹಲಿಯ ಎಂಟು ಸರಕಾರಿ ಶಾಲೆಗಳಲ್ಲಿ, ಸಂದರ್ಶನ ಮಾಡಲು ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಜೊತೆ ನಂಟು ಬೆಳೆಸಿಕೊಳ್ಳುವುದರಿಂದ ಆರಂಭಗೊಂಡು, ತರಗತಿಗಳನ್ನು ಗಮನಿಸುವುದು, ಶಿಕ್ಷಕರು ಮತ್ತು ಇತರೆ ಶೈಕ್ಷಣಿಕ ಅಧಿಕಾರಿಗಳ ಜೊತೆ ವಿಷಯ ನಿರ್ದಿಷ್ಟ ಗುಂಪು ಚರ್ಚೆಗಳನ್ನು ನಡೆಸಿದೆ. ಪಠ್ಯಕ್ರಮದ ಶೈಕ್ಷಣಿಕ ಪ್ರಕ್ರಿಯೆಗಳನ್ನು ಮತ್ತು ಅವುಗಳ ತರಗತಿ ಆನ್ವಯಿಕತೆಗಳನ್ನು ಹೆಚ್ಚು ಸಮಗ್ರವಾಗಿ ಅರ್ಥಮಾಡಿಕೊಳ್ಳಲು ಇದು ನನಗೆ ನೆರವಾಯಿತು.

**ಸಂತೋಷದ ಪಠ್ಯಕ್ರಮ ಎಂದರೆ ಏನು?**




ಆನಂದದ ತ್ರಿವಳಗಳು

ಸಂತೋಷ ತ್ರಿವಳ (The Triad of Happiness) ಎಂದು ಕರೆಯಲಾಗುವ ಸಂತೋಷದ ಪಠ್ಯಕ್ರಮವು (Happiness Curriculum) ವೈಜ್ಞಾನಿಕವಾಗಿ ವಿನ್ಯಾಸಗೊಂಡ ಅಭ್ಯಾಸ–ಕ್ರಮವಾಗಿದೆ. ಪ್ರಬಲವಾದ ಮಾನವೀಯ ಮತ್ತು ಸಾಮಾಜಿಕ ಮಾದರಿಗಳನ್ನು ಆಧರಿಸಿದ ಈ ಪಠ್ಯಕ್ರಮವನ್ನು ತತ್ವಜ್ಞಾನಿ ಅಗ್ರಹಾರ ನಾಗರಾಜ್ (1999) ಅವರು ರೂಪಿಸಿದ್ದಾರೆ. (SCERT, Delhi, 2019). ಇದರ ಪ್ರಕಾರ, ಮನುಷ್ಯರು ಇಂದ್ರಿಯಗಳು, ಸಂಬಂಧಗಳು ಮತ್ತು ಕಲಿಕೆಯ ಮೂಲಕ ಸಂತೋಷವನ್ನು ಪಡೆದುಕೊಳ್ಳುತ್ತಾರೆ. ಇವುಗಳಲ್ಲಿ ಪ್ರತಿಯೊಂದೂ, ಭೌತಿಕ, ವರ್ತನಾತ್ಮಕ, ಬೌದ್ಧಿಕ, ಮತ್ತು ಅನುಭವಾತ್ಮಕ ಎಂಬ ಮನುಷ್ಯನ ಬದುಕಿನ ನಾಲ್ಕು ಆಯಾಮಗಳನ್ನು ಸಂಬೋಧಿಸುತ್ತವೆ:. ಎ. ನಾಗರಾಜ್ ಅವರ ಪ್ರಕಾರ, ಮನುಷ್ಯ ಜೀವಿಗಳು ಬದುಕಿನ ಈ ಎಲ್ಲಾ ಅಂಶಗಳಂದ ಅಗತ್ಯತೆಗಳನ್ನು ಈಡೇರಿಸಿಕೊಳ್ಳುವುದಕ್ಕೆ ಪ್ರಯತ್ನಿಸುತ್ತಾರೆ. ಅದರ ಫಲಿತಾಂಶವೇ ಶಾಂತಿ, ತೃಪ್ತಿ ಮತ್ತು ಸಂತೋಷಗಳ ಗಳಿಕೆ ಆಗಿರುತ್ತದೆ. ಇವೆಲ್ಲವೂ ಒಟ್ಟಿಗೆ ಮಾನವ ಆನಂದವನ್ನು ರೂಪಿಸುತ್ತವೆ.

ಈ ಮಾದರಿಯ ಆಧಾರದ ಮೇಲೆ ಅದರ ಎಲ್ಲಾ ಘಟಕಗಳು ಮತ್ತು ವಿನ್ಯಾಸಗಳು ಮಕ್ಕಳಿಗೆ ಕಲಿಕೆಯ ಸಂದರ್ಭದಲ್ಲಿ ಈ ಮೂರು ಬಗೆಯ ಆನಂದವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುವಂತೆ ದೆಹಲಿಯ ಶಿಕ್ಷಣ ಇಲಾಖೆಯು ತನ್ನ ಪಠ್ಯಕ್ರಮವನ್ನು ರೂಪಿಸಿಕೊಂಡಿದೆ. ಪಠ್ಯದ ಮುಂದಿನ ವಿಷಯ ಹಿಂದಿನದ್ದಕ್ಕೆ ತಳುಕು ಹಾಕಿಕೊಂಡಿದ್ದು, ಮಗು ಒಂದು ತರಗತಿಯಿಂದ ನಂತರದ ತರಗತಿಗೆ ಬೆಳವಣಿಗೆ ಹೊಂದುತ್ತಿದ್ದಂತೆ ಜ್ಞಾನವು ಗಾಢವಾಗುವುದು ಎಂಬರ್ಥದಲ್ಲಿ ಕಲಿಕಾ ಮಾದರಿಗಳನ್ನು ಸುರುಳಿ ಆಕೃತಿಯಲ್ಲಿ ರಚಿಸಲಾಗಿದೆ. ಶಿಕ್ಷಕರ ಮಾರ್ಗದರ್ಶನಕ್ಕಾಗಿ 'ಸಂತೋಷದ ತರಗತಿಗೆ ಶಿಕ್ಷಕರ ಕೈಪಿಡಿ'ಯನ್ನು (Teacher's Handbook for Happiness Class) ಒದಗಿಸಲಾಗಿದೆ.

ಪಠ್ಯಕ್ರಮದ ರಚನೆಕಾರರ ಪ್ರಕಾರ, ಶಿಕ್ಷಕರು, ತತ್ವಜ್ಞಾನಿಗಳು ಮತ್ತು ಇತರರ ಮಾರ್ಗದರ್ಶನದ ಜೊತೆಗೆ ರಚಿತವಾದ ಅದರ ವಸ್ತು ವಿಷಯಗಳು ಸಾರ್ವತ್ರಿಕವಾದುದು ಮತ್ತು ವಯೋಮಾನಕ್ಕೆ ತಕ್ಕುದಾಗಿ ವಿನ್ಯಾಸಗೊಂಡಿದೆ. ವಿದ್ಯಾರ್ಥಿಗಳ ಅರಿವಿನ ಪರಿಧಿ ಮತ್ತು ಸಾವಧಾನತೆಯನ್ನು ಹೆಚ್ಚಿಸುವುದು, ಕಲಿಕೆಯನ್ನು ಗಾಢವಾಗಿಸುವುದು, ಆ ಮೂಲಕ ಭವಿಷ್ಯದಲ್ಲಿ ತಾವೇನಾಗು–ತ್ತೇವೆಯೋ ಎಂಬುದರ ಆಚೆಗೂ ಹೆಚ್ಚು ಸಂತೋಷದ ಮತ್ತು ಅರ್ಥಪೂರ್ಣವಾದ ಬದುಕನ್ನು ನಡೆಸಲು ಸಾಧ್ಯವಾಗಿಸುವುದು ಈ ಪಠ್ಯಕ್ರಮದ ಉದ್ದೇಶಿತ ಫಲಿತವಾಗಿದೆ. ಈ ಪಠ್ಯಕ್ರಮದಿಂದ ಪ್ರತಿ ಮಗುವೂ ಜನಾಂಗೀಯತೆ, ಪ್ರಾದೇಶಿಕತೆ, ಧರ್ಮ, ಮತ್ತು ಜಾತಿಯ ಹೊರತಾಗಿಯೂ ಹೇಗೆ ಆನಂದವಾಗಿರುವುದು ಎಂಬುದನ್ನು ಕಲಿಯಬಹುದು ಎಂದು ಪಠ್ಯ ರಚನೆಕಾರರು ಭಾವಿಸುತ್ತಾರೆ, ಯಾಕೆಂದರೆ ಸಂತೋಷವಾಗಿರುವುದು ಒಂದು ಕೌಶಲವಾಗಿದ್ದು, ಅದನ್ನು ಸರಿಯಾದ ಮಾರ್ಗದರ್ಶನದಿಂದ ಅಭ್ಯಾಸ ಮಾಡ–ಬಹುದು ಮತ್ತು ಕಲಿಯಬಹುದು.

**ಪ್ರಮುಖ ಗುಣಲಕ್ಷಣಗಳು:**

- ಪ್ರತೀ ಸಂತೋಷದ ತರಗತಿಯು ಮೂರು ಘಟಕಗಳನ್ನು ಒಳಗೊಂಡಿದೆ– ಸಾವಧಾನತೆ (10 ನಿಮಿಷ), ಒಂದು ಚಟುವಟಿಕೆ ಅಥವಾ ಕತೆ (25 ನಿಮಿಷ) ಇದನ್ನನುಸರಿಸಿ ಚಟುವಟಿಕೆ ಆಧಾರಿತ ಚರ್ಚೆಗಳು. ಪ್ರತಿ ದಿನ ನಿರ್ದಿಷ್ಟ ವಿಷಯದ ಮೇಲೆ ಗಮನಕೊಡಲಾಗುತ್ತದೆ, ಉದಾಹರಣೆಗೆ, ಸೋಮವಾರ ಸಾವಧಾನವಾಗಿ ಕೇಳಿಸಿಕೊಳ್ಳುವುದಕ್ಕೆ ವಿಶೇಷ ಗಮನ ಹರಿಸಲಾಗುತ್ತದೆ; ಶನಿವಾರ ಅಭಿವ್ಯಕ್ತಿಗೆ ಗಮನ ವಹಿಸುವುದು ಇತ್ಯಾದಿ.

- ಪಠ್ಯಕ್ರಮ ಕಠಿಣವಾದ ಕಾಲ–ಮಿತಿಯನ್ನು ಅನುಸರಿಸುವುದಿಲ್ಲ. ಪಾಠದ ಸಾರ ಮಕ್ಕಳಿಗೆ ತಲುಪಲಿಲ್ಲ ಎನಿಸಿದರೆ ಶಿಕ್ಷಕರು ಒಂದೇ ಘಟಕವನ್ನು ವರ್ಷಪೂರ್ತಿ ಬೋಧಿಸಬಹುದು.

- ಮಕ್ಕಳೇ ತರಗತಿಗಳನ್ನು ಮುನ್ನಡೆಸುವ ಮತ್ತು ಶಿಕ್ಷಕರು ಚರ್ಚೆಗೆ ಅನುವು ಮಾಡಿಕೊಡುವಂಥ ಪಠ್ಯಕ್ರಮವು ಮಗು ಕೇಂದ್ರಿತ ಶೈಕ್ಷಣಿಕ ಪ್ರಕ್ರಿಯೆಗಳನ್ನು ಅನುಸರಿಸಲಾಗುತ್ತದೆ.

- ಅಲ್ಲಿ ಯಾವುದೇ ಲಿಖಿತ ಪರೀಕ್ಷೆಗಳು ಅಥವಾ ಅಂಕ ನೀಡುವ ವ್ಯವಸ್ಥೆ ಇರುವುದಿಲ್ಲ. ಪ್ರತಿ ಮಗುವಿನ ಬದುಕಿನ ಸಂತೋಷದ ಸ್ಥಿತಿಯನ್ನು ನೇರ ಪರಿವೀಕ್ಷಣೆ ಮತ್ತು ಅವಲೋಕನ ಮಾಡುವುದರ ಮೂಲಕ ಮೌಲ್ಯಮಾಪನ ನಡೆಯುತ್ತದೆ.

- ಈ ಪಠ್ಯಕ್ರಮದ ಉದ್ದೇಶವು ಸಂಪೂರ್ಣವಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ನ್ಯಾಷನಲ್ ಕರಿಕ್ಯುಲಮ್ ಫ್ರೇಮ್‌ವರ್ಕ್) 2005ರ ಜೊತೆಗೆ ಮೇಳೈಸಿದೆ.

**ಆನಂದ ಪಠ್ಯಕ್ರಮ ಮತ್ತು ನೈತಿಕ ವಿಜ್ಞಾನ:**

ಈಗಾಗಲೇ ಹಲವು ದಶಕಗಳಿಂದ ನಮ್ಮ ಶಿಕ್ಷಣ ವ್ಯವಸ್ಥೆಯ ಒಂದು ಭಾಗವಾಗಿರುವ ನೈತಿಕ ವಿಜ್ಞಾನ ಕಾರ್ಯಕ್ರಮಗಳ (Moral Science -MS) ಜೊತೆ ಸಂತೋಷ ಪಠ್ಯಕ್ರಮವೂ ಸಾದೃಶ್ಯ ಹೊಂದಿರುವುದು ಆ ಪಠ್ಯಕ್ರಮದ ಬಿಡುಗಡೆಯ ಬಳಿಕ ಎದುರಿಸಿದ ಪ್ರಮುಖ ಟೀಕೆಯಾಗಿದೆ.

ಎರಡೂ ಕಾರ್ಯಕ್ರಮಗಳಲ್ಲಿ ಸಮಾನ ವಿಷಯಗಳಿದ್ದರೂ ಕೂಡ ಅವು ಒಂದೇ ಅಲ್ಲ ಎಂಬುದನ್ನು ನನ್ನ ಅಧ್ಯಯನದ ಮೂಲಕ ನಾನು ಕಂಡುಕೊಂಡೆ. ಎರಡರ ಮೂಲ ಮೌಲ್ಯಗಳು ಒಂದೇ ತೆರನಾಗಿದ್ದರೂ, ಅವುಗಳ ಗುಣಲಕ್ಷಣಗಳಲ್ಲಿ ಭಿನ್ನತೆಗಳಿವೆ. ನೈತಿಕ ವಿಜ್ಞಾನ ಕಾರ್ಯಕ್ರಮವು ಪೂರ್ವ ನಿರ್ಧರಿತ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಕೊಡುವ ಗುರಿಯನ್ನು ಹೊಂದಿದೆ. ಇಲ್ಲಿ ಬಳಸುವ ಕತೆಗಳು ಮತ್ತು ಶೈಕ್ಷಣಿಕ ವಿಧಾನಗಳು ಬಹುತೇಕ ಶಿಕ್ಷಕ ಕೇಂದ್ರಿತವಾದದ್ದು ಮತ್ತು 'ಈ ಕತೆಯಿಂದ ನೀವು ಕಲಿತ ನೀತಿ ಏನು?' ಎಂಬ ಸಾಮಾನ್ಯ ಪ್ರಶ್ನೆಯನ್ನು ಚರ್ಚೆಯ ಸಂದರ್ಭ ಕೇಳಲಾಗುತ್ತದೆ.

ಆದರೆ ಸಂತೋಷದ ತರಗತಿಯಲ್ಲಿ ಕೇಳಲಾಗುವ ಪ್ರಶ್ನೆಗಳು ಹೆಚ್ಚು ಮಗು ಕೇಂದ್ರಿತವಾದದ್ದು ಎಂಬುದನ್ನು ಆ ತರಗತಿಗಳ ಅವಲೋಕನದಿಂದ ನಾನು ತಿಳಿದುಕೊಂಡಿದ್ದೇನೆ. ನೀವೇನು ಕಲಿತಿರಿ ಎಂಬ ಪ್ರಶ್ನೆಯ ಬದಲಿಗೆ, ಒಂದು ನಿರ್ದಿಷ್ಟ ಪಾತ್ರವು ಹಾಗೆ ಯಾಕೆ ಮಾಡಿತು ಎಂದು ನಿಮಗನ್ನಿಸುತ್ತದೆ ಅಥವಾ ಅವನ/ಅವಳ ಸ್ಥಾನದಲ್ಲಿ ನಾವಿದ್ದಿದ್ದರೆ ನಾವೇನು ಮಾಡುತ್ತಿದ್ದೆವು? ಎಂಬಂತಹ ಪ್ರಶ್ನೆಗಳು ಇರುತ್ತವೆ. ಆಲೋಚಿಸಲು ಮತ್ತು ಚಿಂತಿಸಿ ಉತ್ತರ ನೀಡುವುದನ್ನು ವಿದ್ಯಾರ್ಥಿಗಳಿಗೆ ಬಿಡಲಾಗುತ್ತದೆ.

ನೈತಿಕ ತರಗತಿಗಳಲ್ಲಿ, 45 ಮಕ್ಕಳು ಕತೆಯಿಂದ ಒಂದು ನೀತಿಯನ್ನು ತೆಗೆದುಕೊಂಡರೆ ಸಂತೋಷ ತರಗತಿಗಳಲ್ಲಿ ಅದೇ ಕತೆಗೆ 45 ವಿಭಿನ್ನ ದೃಷ್ಟಿಕೋನಗಳು ಸಿಗಬಹುದು ಎಂಬುದನ್ನು ಇದು ಸರಳವಾಗಿ ಸೂಚಿಸುತ್ತದೆ.

**ಸಂತೋಷದ ಪಠ್ಯಕ್ರಮದ ಬಗೆಗಿನ ಗ್ರಹಿಕೆಗಳು:**

ದೇಶದಲ್ಲಿರುವ ಒಟ್ಟು ಶಾಲೆಗಳಿಗೆ ಹೋಲಿಸಿದರೆ ಪ್ರಸ್ತುತ ಸಂತೋಷದ ಪಠ್ಯಕ್ರಮವು ಅತೀ ಕಡಿಮೆ ಸಂಖ್ಯೆಯ ಶಾಲೆಗಳಲ್ಲಿ ಮಾತ್ರ ಅಳವಡಿಕೆಯಾಗಿ ಜಾರಿಯಲ್ಲಿದೆ ಎಂಬುದನ್ನು ನಾನು ಕಂಡುಕೊಂಡೆ. ಹಾಗಿದ್ದೂ ಸಂತೋಷ ಪಠ್ಯಕ್ರಮದ ಚಿಂತನೆಯು ಎಲ್ಲಾ ಭಾಗೀದಾರರಿಗೆ ಬೇರೆಬೇರೆ ರೀತಿಯಾಗಿರುವುದನ್ನು ಕಂಡುಕೊಂಡಿದ್ದೇನೆ.

- ಪ್ರಾಂಶುಪಾಲರಿಗೆ, ಸಂತೋಷ ಸಂಯೋಜಕರಿಗೆ ಮತ್ತು ಜಿಲ್ಲಾ ಸಂಯೋಜಕರಿಗೆ ಇದು ಸ್ವ–ನಂಬಿಕೆಯನ್ನು, ಆರೋಗ್ಯಕರ ಸಂಬಂಧಗಳನ್ನು, ಒಂದು ಒಳ್ಳೆಯ ಮತ್ತು ಸುರಕ್ಷಿತ ಸಮಾಜವನ್ನು ನಿರ್ಮಿಸುವುದು ಹಾಗೂ ಮಕ್ಕಳಲ್ಲಿ ಪಾರಿಸಾರಿಕ ಸುಸ್ಥಿರತೆಯ ಸಂವೇದನೆಯನ್ನು ಪ್ರೋತ್ಸಾಹಿಸುವುದು ಆಗಿದೆ.

- ಶಿಕ್ಷಕರ ಅಭಿವೃದ್ಧಿ ಸಂಯೋಜಕರಿಗೆ ಮತ್ತು ಶಾಲೆಯ ಮಾರ್ಗದರ್ಶಕರಿಗೆ, ಇದೆಲ್ಲವೂ ಮುಖ್ಯವಾಗಿ ಮಕ್ಕಳಲ್ಲಿ ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸಿ ಆ ಮೂಲಕ ಅವರು ಸಾವಧಾನದಿಂದ ವಿಷಯಗಳಿಗೆ ಗಮನಕೊಡುವಂತೆ ಮಾಡುವುದಾಗಿದೆ.

- ಶಿಕ್ಷಕರಿಗೆ, ಅದು ಮಕ್ಕಳ ಒತ್ತಡದ ಮಟ್ಟವನ್ನು ನಿರ್ವಹಿಸುವುದಕ್ಕೆ ನೆರವಾಗುವ, ಆ ಮೂಲಕ ಅವರು ತಮ್ಮ ಅಧ್ಯಯನಗಳ ಕಡೆಗೆ ಮತ್ತೂ ಉತ್ತಮವಾದ ಗಮನವಹಿಸಲು ಒಳ್ಳೆಯ ಮತ್ತು ಕೆಟ್ಟ ಅಭ್ಯಾಸಗಳ ಹಾಗೂ ನೈತಿಕ ಮೌಲ್ಯಗಳ ಕುರಿತಂತೆ ಇದೆ.

- ವಿದ್ಯಾರ್ಥಿಗಳಿಗೆ, ಇದು ಕತೆಗಳನ್ನು ಕೇಳುವ, ಚಟುವಟಿಕೆಗಳನ್ನು ಮಾಡುತ್ತಲೇ ಒಳ್ಳೆಯ ವಿಷಯಗಳನ್ನು ಕಲಿಯುವ ಒಂದು ಮೋಜಿನ ಅವಧಿಯಾಗಿದೆ.

- ಎಎಪಿ ಪದಾಧಿಕಾರಿಗಳ ಪ್ರಕಾರ, ಇದು ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಶಕ್ತ ಮತ್ತು ಕ್ರಿಯಾಶೀಲಗೊಳಿಸುತ್ತದೆ. ಮನುಕುಲದ ಸಮಗ್ರ ಬೆಳವಣಿಗೆಯತ್ತ ವಿದ್ಯಾರ್ಥಿಗಳನ್ನು ಪ್ರಾಮಾಣಿಕ ಮತ್ತು ಜವಾಬ್ದಾರಿಯುತ ಮನುಷ್ಯರನ್ನಾಗಿ ಬೆಳೆಸುತ್ತದೆ. (ಎಸ್‌ಸಿಇಆರ್‌ಟಿ, ಡೆಲ್ಲಿ, 2019)

ಸಂತೋಷ ಪಠ್ಯಕ್ರಮವನ್ನು ಪ್ರತೀ ಭಾಗೀದಾರರೂ ವಿಭಿನ್ನ ದೃಷ್ಟಿಕೋನಗಳಿಂದ ನೋಡುತ್ತಾರೆ. ಕಳೆದ ಎರಡು ವರ್ಷಗಳಲ್ಲಿ ಸಂತೋಷ ಶಿಕ್ಷಕರು ಪಡೆದ ಅಸಮರ್ಪಕ ತರಬೇತಿಯೇ ಈ ದೃಷ್ಟಿಕೋನದ ವ್ಯತ್ಯಾಸಕ್ಕೆ ಕಾರಣವಾಗಿದೆ. 2018ರ ಆರಂಭದಲ್ಲಿ ಕಾರ್ಯಕ್ರಮವನ್ನು ಬಿಡುಗಡೆ ಮಾಡಿದ ಸಮಯದಲ್ಲಿ ಮಾತ್ರ ಒಂದೇ ಒಂದು ಕಾರ್ಯಾಗಾರವನ್ನು ಶಿಕ್ಷಕರಿಗೆ ಆಯೋಜಿಸಲಾಗಿತ್ತು. ಹೊಸ ಶಿಕ್ಷಕರಿಗೆ ಸಹಾಯ ಮಾಡಲು, ಸಂತೋಷ ಸಂಯೋಜಕರು, ಶಾಲಾ ಮಾರ್ಗದರ್ಶಕರು, ಮತ್ತು ಶಿಕ್ಷಕರ ಅಭಿವೃದ್ಧಿ ಸಂಯೋಜಕರು ಇದ್ದರೂ ಕೂಡ ಮತ್ತವರು ಸ್ವತಃ ಶಿಕ್ಷಕರಿಗಿಂತಲೂ ಹೆಚ್ಚು ಆಗಾಗ್ಗೆ ತರಬೇತಿ ಪಡೆದಿದ್ದು ಮಾರ್ಗದರ್ಶನ ಮಾಡುತ್ತಿದ್ದರೂ ಕೂಡ ಎಲ್ಲಾ ಹೊಸ ಶಿಕ್ಷಕರು ಮತ್ತು ಈ ಪಠ್ಯಕ್ರಮವನ್ನು ಹೊಸ ಅವಧಿಗೆ ಆಯ್ಕೆಮಾಡಿಕೊಂಡ ಶಿಕ್ಷಕರಿಗೆ ನೇರವಾದ ತರಬೇತಿ ಪಡೆದಿರಲಿಲ್ಲ ಎಂಬುದು ಇದರ ಅರ್ಥ. ಆದರೆ ಸಂಗ್ರಹಿಸಿದ ಮಾಹಿತಿಗಳು ತೋರಿಸುವ ಪ್ರಕಾರ, ಶೈಕ್ಷಣಿಕ ಒತ್ತಡದ ಕಾರಣದಿಂದ ಆನಂದ ಪಠ್ಯಕ್ರಮಕ್ಕೆ ಸಂಬಂಧಿಸಿದ ನಿಯಮಿತ ಸಭೆಗಳು ಶಾಲೆಗಳಲ್ಲಿ ನಡೆದದ್ದು ತುಂಬಾ ಕಡಿಮೆ. ಇದರ ಪರಿಣಾಮವಾಗಿ ಶಿಕ್ಷಕರು ಮತ್ತು ಸರಕಾರದ ನಡುವೆ ಅಂತರವು ಸೃಷ್ಟಿಯಾಯಿತು.

ಶಿಕ್ಷಕ ತರಬೇತಿ ಕಾರ್ಯಕ್ರಮಗಳು ಭವಿಷ್ಯದ ಶಿಕ್ಷಕರನ್ನು ಈ ಪಠ್ಯಕ್ರಮಕ್ಕೆ ತರಬೇತುಗೊಳಿಸದಿರುವುದು ಮತ್ತು ಹೊಸ ಶಿಕ್ಷಕರಿಗೆ ಶಾಲೆಗೆ ಸೇರಿದ ಮೇಲಷ್ಟೇ ಈ ಪಠ್ಯಕ್ರಮದ ಬಗ್ಗೆ ತಿಳಿದುಕೊಳ್ಳಬೇಕಾಗಿದ್ದುದು ಯುವ ಶಿಕ್ಷಕರಿಗೆ ಪೂರ್ವಸಿದ್ಧತೆ ಇಲ್ಲದೆ ಇರುವುದಕ್ಕೆ ಮತ್ತೊಂದು ಕಾರಣವಾಗಿದೆ. ಇದರ ಪರಿಣಾಮವಾಗಿ, ಶಿಕ್ಷಕರ ಕೈಪಿಡಿಯೊಂದೇ ಶಿಕ್ಷಕರಿಗಿರುವ ಅತ್ಯಂತ ವಿಶ್ವಾಸಾರ್ಹ ಮಾರ್ಗದರ್ಶಿಯಾಗಿದೆ. ಅದು ಈಗ ಸಂತೋಷ ಪಠ್ಯಕ್ರಮದ ಎಲ್ಲಾ ಯುವ ಮತ್ತು ಹೊಸ ಶಿಕ್ಷಕರಿಗಿರುವ ಏಕೈಕ ಪರಾಮರ್ಶೆಯ ಪುಸ್ತಕವಾಗಿದೆ.

**ವಿದ್ಯಾರ್ಥಿಗಳ ಮೇಲಿನ ಪರಿಣಾಮಗಳು:**

ಮಕ್ಕಳ ಮೇಲೆ ಎದ್ದು ಕಾಣುವಂತಹ ಸಕಾರಾತ್ಮಕ ಪರಿಣಾಮಗಳು ಉಂಟಾಗಿರುವುದು ಕಂಡುಬಂದಿದೆ. ಶಿಕ್ಷಕರ ಪ್ರಕಾರ, ಶಿಕ್ಷಕ–ವಿದ್ಯಾರ್ಥಿ ಅಂತರವನ್ನು ಸರಿದೂಗಿಸಲು ತಮಗೆ ಮತ್ತು ಮಕ್ಕಳಿಗೆ ಇಬ್ಬರಿಗೂ ಈ ಪಠ್ಯಕ್ರಮವು ಸಹಾಯ ಮಾಡಿದೆ. ಹಿಂಸೆ, ವಿಶೇಷವಾಗಿ ಹುಡುಗರ ಶಾಲೆಗಳಲ್ಲಿ ಕಡಿಮೆಯಾಗಿದೆ. ಮಕ್ಕಳು ತಮ್ಮ ಖಾಸಗಿ ಕತೆ ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಆರಂಭಿಸಿದ್ದಾರೆ ಇದರ ಕಾರಣವಾಗಿ ಶಾಲೆಗಳಲ್ಲಿ ಒಂದು ಸುರಕ್ಷಿತ ಮತ್ತು ತೀರ್ಮಾನ ಕೊಡದಿರುವ ವಾತಾವರಣವು ಸೃಷ್ಟಿಯಾಗಿದೆ. ಪೋಷಕರು ಕೂಡ ತಮ್ಮ ಮಕ್ಕಳಲ್ಲಿ ಗುರುತಿಸುವಂತಹ ಬದಲಾವಣೆಗಳನ್ನು ಕಾಣುತ್ತಿದ್ದಾರೆ. ತಮ್ಮ ಮಕ್ಕಳು ಈಗ ಅವರ ಬದುಕಿಗೆ ಸಹಾಯ ಮಾಡುವಂತಹ ಬಹಳಷ್ಟು ವಿಚಾರಗಳನ್ನು ಕಲಿಯುತ್ತಿದ್ದಾರೆ ಎಂದು ಪೋಷಕರು ಹೇಳುತ್ತಾರೆ. ಉದಾಹರಣೆಗೆ, ಮೊದಲು ಅವರ ಮಗ ಮಾರುಕಟ್ಟೆಗೆ ಹೋದಾಗಲೆಲ್ಲ ತನಗೆ ಏನಾದರೂ ಬೇಕೆಂದು ಬೇಡಿಕೆ ಇಡುತ್ತಿದ್ದ. ಆದರೆ ಈಗ ಹಾಗೆ ಮಾಡುವುದನ್ನು ಅವನು ನಿಲ್ಲಿಸಿದ್ದಾನೆ ಎಂದು ಪೋಷಕರೊಬ್ಬರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ. 'ನನ್ನ ಗೆಳೆಯರಿಗೆ ತೋರಿಸುವ ಸಲುವಾಗಿ ನನಗೆ ಯಾವುದೇ ವಸ್ತು ಬೇಡ, ನನಗೆ ಅವಶ್ಯವಿರುವ ವಸ್ತುಗಳನ್ನು ಮಾತ್ರ ನಾನು ತೆಗೆದುಕೊಳ್ಳುತ್ತೇನೆ' ಎಂದು ಆತನು ತನ್ನ ತಂದೆಗೆ ಹೇಳುತ್ತಿದ್ದಾನೆ.

**ಮುಂದಿನ ದಾರಿ:**

ಈ ಅಧ್ಯಯನದಿಂದ ನಾನು ಕಂಡುಕೊಂಡ ಅಂಶಗಳು ಇವು: ಈ ಪಠ್ಯಕ್ರಮವು ವಿದ್ಯಾರ್ಥಿಗಳ ಬದುಕಿನ ಮೇಲೆ ಕೆಲವು ಮಟ್ಟಿನ ಸಕಾರಾತ್ಮಕ ಪರಿಣಾಮವನ್ನು ಉಂಟುಮಾಡಿದೆಯಾದರೂ, ಪಠ್ಯಕ್ರಮ ಮತ್ತು ನನ್ನ ಅಧ್ಯಯನ ಸೀಮಿತ ಅವಧಿಯದ್ದಾಗಿದ್ದುದರಿಂದ ಶಿಕ್ಷಣ ವ್ಯವಸ್ಥೆಯ ಮೇಲೆ ವ್ಯಾಪಕ ಪರಿಣಾಮ ಬೀರಿದೆ ಎಂದು ಈಗಲೇ ಹೇಳಲಾಗದು. ಆದರೆ ಶಿಕ್ಷಕರ ಶಿಕ್ಷಕರು, ಶಿಕ್ಷಕರು ಮತ್ತು ಪೋಷಕರು ಒಟ್ಟಾಗಿ ಕೆಲಸ ಮಾಡಿದರೆ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರತಿ ಮಗುವೂ ಖುಷಿಯಾಗಿರುವುದನ್ನು ಕಲಿಯಲು ಸಾಧ್ಯವೆಂಬ ಒಂದು ವಿಷಯವನ್ನು ನನ್ನ ಅಧ್ಯಯನವು ದೃಢಪಡಿಸಬಲ್ಲದು. ಈಗ ಇನ್ನೂ ಸಂತೋಷ ಪಠ್ಯಕ್ರಮವು ನಮ್ಮ ರಾಷ್ಟ್ರೀಯ ಪಠ್ಯಕ್ರಮದ ಭಾಗವಾಗಿಲ್ಲ, ಆದರೆ ಅದು ಒಳಗೊಂಡಿರುವ ಮೌಲ್ಯಗಳ ಮೂಲವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮತ್ತು ಹೊರೆ ರಹಿತ ಕಲಿಕೆ (1993)ಯಲ್ಲಿ ಕಾಣಬಹುದು. ಇದರ ಅರ್ಥ, ದೆಹಲಿ ಮಾದರಿಯನ್ನು ಮನಸ್ಸಿನಲ್ಲಿಟ್ಟುಕೊಂಡು ಈ ರಾಷ್ಟ್ರೀಯ ಮಾರ್ಗದರ್ಶಕ ಸೂತ್ರವನ್ನು ಮತ್ತು ಸಲಹೆಗಳನ್ನು ನಾವು ಕಾರ್ಯಗತಗೊಳಿಸಬಹುದಾದರೆ, ಯಾವುದೇ ಶಾಲೆ, ಶಿಕ್ಷಕರು ಅಥವಾ ಪೋಷಕರು ಆನಂದವನ್ನು ಅಭ್ಯಾಸ ಮಾಡಿಕೊಳ್ಳಲು ಮಕ್ಕಳಿಗೂ ಮತ್ತು ತಮಗೆ ತಾವೂ ಸಹಾಯ ಮಾಡಿಕೊಳ್ಳಬಹುದು. ನಾವು ನಂಬಲೇ ಬೇಕಿರುವ ಒಂದು ಸಂಗತಿ ಎಂದರೆ: ಸಂತೋಷ ಎನ್ನುವುದು ಒಂದು ಭಾವನೆ ಎನ್ನುವುದಕ್ಕಿಂತಲೂ ಮಿಗಿಲಾದದ್ದು. ಸೂಕ್ತ ಮಾರ್ಗದರ್ಶನ ನೀಡಿದರೆ ಮತ್ತು ಅಭ್ಯಾಸ ಮಾಡಿದರೆ ಇದನ್ನು ಕಲಿಸಬಹುದು.

**ಆಕರಗಳು ಮತ್ತು ಹೆಚ್ಚಿನ ಓದಿಗಾಗಿ**


Directorate of Education, Government of NCT of Delhi. (n.d.). 2015 and beyond Delhi Education Revolution. Delhi: Directorate of Education, Government of NCT of Delhi.

ET Contributors. (2018, March 22). A student commits suicide in India every hour; how can our educational system prevent this? Retrieved from Economic Times: *https://economictimes.indiatimes.com/magazines/panache/between-the-lines/a-student-commits-suicide-in-india-every-hour-how-can-our-educational-system-prevent-this/articleshow/63411123.cms*

Heignotes. (2016, December 17). THE PREAMBLE OF THE INDIAN CONSTITUTION AND ITS EDUCATIONAL IMPLICATIONS. Retrieved from Heignotes: https://heignotes.com/2016/12/17/the-preamble-of-the-indian-constitution-and-its-educational-implications/

Liav Orgad. (2010). The preamble in constitutional interpretation. International Journal of Constitutional Law, 714-738.

SCERT, Delhi. (2019). Happiness Curriculum. Delhi: SCERT, Delhi.





**ಕೃತಿ ಗುಪ್ತ,** ಶಿಕ್ಷಕರ ಕುಟುಂಬದಲ್ಲಿ ಹುಟ್ಟಿ ಬೆಳೆದ ಇವರು, ಸಣ್ಣ ವಯಸ್ಸಿನಲ್ಲಿಯೇ ಶಿಕ್ಷಣದ ಕಡೆಗೆ ಒಲವು ಬೆಳೆಸಿಕೊಂಡವರು. ತಮ್ಮ ಆಸಕ್ತಿಯನ್ನು ಮುಂದುವರಿಸಿ, ದೆಹಲಿ ವಿಶ್ವವಿದ್ಯಾಲಯದಿಂದ ಪ್ರಾಥಮಿಕ ಶಿಕ್ಷಣದಲ್ಲಿ ಪದವಿ ಪೂರೈಸಿದರು. ಜೊತೆಗೆ ಏಕಲವ್ಯ, ಸಮಾ (ಮಹಿಳೆ ಮತ್ತು ಆರೋಗ್ಯ ಸಂಪನ್ಮೂಲ ಗುಂಪು) ಮತ್ತು ಲೋಕಪಂಚಾಯತ್‌ಗಳಂತಹ ಹಲವು ಸಂಸ್ಥೆಗಳಲ್ಲಿ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ್ದಾರೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಬೆಂಗಳೂರಿನಲ್ಲಿ ಈ ವರ್ಷ ಅವರು ಅಭಿವೃದ್ಧಿಯಲ್ಲಿ ತಮ್ಮ ಉನ್ನತ ಶಿಕ್ಷಣವನ್ನು ಮುಗಿಸಿದ್ದಾರೆ. ಶಿಕ್ಷಣ, ಮಾನಸಿಕ ಆರೋಗ್ಯ ಮತ್ತು ಆರೋಗ್ಯವಂತ ಬದುಕಿನ ಕ್ಷೇತ್ರಗಳ ಬಗ್ಗೆ ಅವರಿಗೆ ಆಸಕ್ತಿ ಇದೆ. ಇವರನ್ನು : kritiguptaa96@gmail.com ನಲ್ಲಿಸಂಪರ್ಕಿಸಬಹುದು

ಅನುವಾದ: **ದೇವಿಕ ಧರ್ಮಿಷ್ಟೆ** । ಪರಿಶೀಲನೆ: **ಲತಾ ಕೆ ಸಿ.**